ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು.

ದಿನಾಂಕ: 21-09-2019

# ಪ್ರಕಟಣೆ

2019-20ನೇ ಸಾಲಿನ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಸಂಬಂಧ ಎರಡು ಹಂತಗಳಲ್ಲಿ ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಯ ವಿವರಣಾತ್ಮಕ ಹಾಗೂ ಬಹು ಆಯ್ಕೆ ಪ್ರಶ್ನೆ ಪತ್ರಿಕೆ ಗಳಲ್ಲಿನ ಅಭ್ಯರ್ಥಿಗಳ ವೈಯಕ್ತಿಕ ಅಂಕಗಳನ್ನು ದಿನಾಂಕ: 07-09-2019ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಈ ಸಂಬಂಧ ಅಭ್ಯರ್ಥಿಗಳಿಗೆ ದಿನಾಂಕ: 09-09-2019ರಿಂದ 16-09-2019ರವರೆಗೆ ಸ್ಪರ್ಧಾತ್ಮಕ ಪರೀಕ್ಷೆಯ(ಸಿಇಟಿ) ಅಂಕಗಳನ್ನು ಹೊರತುಪಡಿಸಿ, ವೈಯಕ್ತಿಕ ಮಾಹಿತಿಯ ತಿದ್ದುಪಡಿಗೆ (ಅಭ್ಯರ್ಥಿಯ ಹೆಸರು, ಅಭ್ಯರ್ಥಿಯ ತಂದೆ ತಾಯಿ ಹೆಸರು, ಜನ್ಮ ದಿನಾಂಕ, ಪದವಿ ಮತ್ತು ಬಿ.ಇಡಿ/ ಡಿ.ಇಡಿ ಅಂಕಗಳು) ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ದಿನಾಂಕ: 09-09-2019ರಿಂದ 16-09-2019ರವರೆಗೆ ಕೇಂದ್ರಿಕೃತ ದಾಖಲಾತಿ ಘಟಕದಲ್ಲಿ ಸಲ್ಲಿಕೆಯಾದ ಒಟ್ಟು 1061 ಆಕ್ಷೇಪಣೆಗಳು ಸಲ್ಲಿಕೆಯಾಗಿರುತ್ತದೆ. ಅಭ್ಯರ್ಥಿಗಳು ನೀಡಿದ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ಮಾಹಿತಿಯನ್ನು ಪರಿಗಣಿಸಿ ಡಾಟಬೇಸ್(Database) ನಲ್ಲಿ ಅಪ್‌ಲೋಡ್(upload) ಮಾಡಿದೆ. ಈ ಸಂಬಂಧ ಅಭ್ಯರ್ಥಿಗಳ ಅಂಕ ವಿವರಗಳಲ್ಲಿ ಆಗುವ ವ್ಯತ್ಯಾಸಗಳಿಗೆ ಕೇಂದ್ರೀಕೃತ ದಾಖಲಾತಿ ಘಟಕ ಯಾವುದೇ ರೀತಿ ಜವಾಬ್ದಾರಿಯಾಗಿರುವುದಿಲ್ಲ.

ಮುಂದುವರೆದು ತಾಂತ್ರಿಕ ದೋಷದಿಂದ **ಒಟ್ಟು 645** (ಪರೀಕ್ಷೆ-1ರಲ್ಲಿ 87 ಹಾಗೂ ಪರೀಕ್ಷೆ-2ರಲ್ಲಿ 558) ಅಭ್ಯರ್ಥಿಗಳ ಉತ್ತರ ಪತ್ರಿಕೆಗಳು ಮೂರನೇ ಮೌಲ್ಯಮಾಪನಕ್ಕೆ ಒಳಪಡದೇ ಇರುವುದು ಕಂಡುಬಂದಿರುತ್ತದೆ.

ಪರೀಕ್ಷಾ ನಿಯಮಾನುಸಾರ ಸದರಿ 645 ಅಭ್ಯರ್ಥಿಗಳ ಉತ್ತರಪತ್ರಿಕೆಗಳನ್ನು ಮೂರನೆಯ ಮೌಲ್ಯಮಾಪನಕ್ಕೆ ಒಳಪಡಿಸಿದೆ. ಅಭ್ಯರ್ಥಿಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಈ ಅಭ್ಯರ್ಥಿಗಳು ಪ್ರಕಟಗೊಂಡ ಪರಿಷ್ಕೃತ ಅಂಕಗಳಂತೆ ತಮ್ಮ ವೈಯಕ್ತಿಕ ಅಂಕಪಟ್ಟಿಯಲ್ಲಿ ತಿದ್ದುಪಡಿಯಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

ಪರಿಷ್ಕರಣೆಯಂತೆ 391(ಪರೀಕ್ಷೆ-1ರಲ್ಲಿ 62ಹಾಗೂ ಪರೀಕ್ಷೆ-2ರಲ್ಲಿ 329) ಅಭ್ಯರ್ಥಿಗಳಿಗೆ ಅಂಕಗಳು ಹೆಚ್ಚಾಗಿರುತ್ತದೆ. ಹಾಗೂ 201(ಪರೀಕ್ಷೆ-1ರಲ್ಲಿ 19 ಹಾಗೂ ಪರೀಕ್ಷೆ-2ರಲ್ಲಿ 182) ಅಭ್ಯರ್ಥಿಗಳಿಗೆ ಅಂಕಗಳು ಕಡಿಮೆಯಾಗಿರುತ್ತದೆ. ಉಳಿದಂತೆ 53 ಅಭ್ಯರ್ಥಿಗಳ ಅಂಕಗಳಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ.

21/9/2019

ವಿಶೇಷಾಧಿಕಾರಿ

ಕೇಂದ್ರೀಕೃತ ದಾಖಲಾತಿ ಘಟಕ